**ಮಾನ್ಯ ಜಿಲ್ಲಾ ನೋಂದಣಿ ಅಧಿಕಾರಿಗಳು**
ವಿಜಾಪೂರ ಜಿಲ್ಲಾ
ವಿಜಾಪೂರ

ಮಾನ್ಯರೇ,

ವಿಷಯ: ಸಂಘವನ್ನು ನೋಂದಣಿ ಮಾಡುವ ಕುರಿತು

ನಾವು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 ರ ಮೇರೆಗೆ ನಮ್ಮ ಕೃಷಿ ಮಹಾವಿದ್ಯಾಲಯ ಪದವೀಧರ ಸಂಘ ವಿಜಾಪೂರ ಇದನ್ನು ನೊಂದಾಯಿಸಲು ಸಂಘದ ನಿವೇದನಾ ಪತ್ರಿಕೆ ಮತ್ತು ನಿಬಂದನೆಗಳನ್ನು ಹಾಗೂ ನೋಂದಣಿ ಫೀ ಬಗ್ಗೆ ಚಲನ ತುಂಬಿ ಹಾಜರಪಡಿಸಿರುತ್ತೇವೆ. ನಮ್ಮ ಸಂಘವನ್ನು ನೋಂದಣಿ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇವೆ.

ವಂದನೆಗಳೊಂದಿಗೆ,
ದಿನಾಂಕ:

| ತಮ್ಮ ವಿಶ್ವಾಸಿಗಳು | ಸಹಿ |
|---|---|
| 1. ಶ್ರೀ. ಎಸ್. ಎಸ್. ಕರಭಂತನಾಳ | |
| 2. ಶ್ರೀ. ಸಯೀದ ಅಲ್ಲಾಸ ಆರ್. ಮುಲ್ಲಾ | |
| 3. ಶ್ರೀ. ಸೋಮನಗೌಡ ಬಿ. ಪಾಟೀಲ | |
| 4. ಶ್ರೀ. ಮಹಾದೇವ.ಅಂಬಲಿ | |
| 5. ಶ್ರೀ. ಮಂಜೂನಾಥ ಆರ್. | |
| 6. ಶ್ರೀ. ದಯಾಸಾಗರ ಬಿ. ಪಾಟೀಲ | |
| 7. ಶ್ರೀ. ಸಿ. ಬಿ. ಕಬಾಡಗಿ | |
| 8. ಶ್ರೀ. ಎಸ್. ಜಿ. ಗೊಳ್ಳಗಿ | |
| 9. ಶ್ರೀ. ಸಂತೋಷ ಕೆ. ಪಟ್ಟಣಶೆಟ್ಟಿ | |
| 10. ಶ್ರೀ. ಗುರಪ್ಪ ಎಸ್. ಯಡಹಳ್ಳಿ | |
| 11. ಶ್ರೀ. ಮಹಾಂತೇಶ ಶಿರೂರ | |
| 12. ಶ್ರೀಮತಿ. ಸುಶ್ಮಾ ಮಾಲಿಪಾಟೀಲ | |
| 13. ಶ್ರೀ. ವಿಜಯಕುಮಾರ ಬಿರಾದಾರ | |
| 14. ಶ್ರೀ. ವೆಂಕಟೇಶ ದೇಶಪಾಂಡೆ | |
| 15. ಶ್ರೀ. ಅನೀಲ ಜಾಧವ | |
| 16. ಡಾ. ಎ. ಆರ್. ಅಳಗವಾಡಿ | |
| 17. ಡಾ. ಆರ್. ಎಸ್. ಪೋದ್ದಾರ | |

**ಸಭೆಯ ನಡುವಳಿಕೆಗಳು**

| | | |
|---|---|---|
| ಹೆಸರು | : | ಕೃಷಿ ಮಹಾವಿದ್ಯಾಲಯ ಪದವೀಧರ ಸಂಘ ವಿಜಾಪೂರ |
| ವಿಳಾಸ | : | ಕೃಷಿ ಮಹಾವಿದ್ಯಾಲಯ, ವಿಜಾಪೂರ ಆವರಣ<br>ಸಾಕೀನ: ತಾಲೂಕ : ಜಿಲ್ಲಾ : ವಿಜಾಪೂರ |
| ಕಾರ್ಯವ್ಯಾಪ್ತಿ | : | ಕರ್ನಾಟಕದಲ್ಲಿ ಮಾತ್ರ |
| ಒಟ್ಟು ಸದಸ್ಯರು | : | 15 ಜನರು |
| ಹಾಜರಿದ್ದ ಸದಸ್ಯರು | : | 15 ಜನರು |
| ವಿಷಯ | : | ಸಂಘವನ್ನು ನೋಂದಣಿ ಮಾಡುವ ಕುರಿತು |

**ದಿನಾಂಕ: 14–02–2009 ರಂದು ನಡೆದ ಸಭೆಯ ನಡವಳಿಕೆಗಳು**

**ಠರಾವು ನಂಬರು 1** : ಮೇಲ್ಕಂಡ ನಮ್ಮ ಸಂಘವನ್ನು ಕರ್ನಾಟಕ ಸಂಘಗಳ ನೋಂದಣಿ ಖಾಯ್ದೆ1960ರ ಪ್ರಕಾರ ಮೆ. ಜಿಲ್ಲಾ ನೋಂದಣಿ ಅಧಿಕಾರಿಗಳು, ವಿಜಾಪೂರ ಜಿಲ್ಲೆ, ವಿಜಾಪೂರ ಇವರ ಕಛೇರಿಯಲ್ಲಿ ನೋಂದಣಿ ಮಾಡಿಸುವಂತೆ ದಿನಾಂಕ: 02–06–2009 ರಂದು ಇವರ ಅಧ್ಯಕ್ಷತೆಯಲ್ಲಿಸೇರಿದ ಸಭೆಯಲ್ಲಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

: ಸೂಚಕರು:. ಶ್ರೀ. ಎಸ್. ಕೆ. ಪಟ್ಟನಶೆಟ್ಟಿ

: ಅನುಮೋದಕರು:. ಶ್ರೀ. ಸಿ. ಬಿ. ಕಬಾಡಗಿ

**ಠರಾವು ನಂಬರು 2** : ಮೇಲ್ಕಂಡ ನಮ್ಮ ಸಂಘವನ್ನು ಕರ್ನಾಟಕ ಸಂಘಗಳ ನೊಂದಣಿ ಖಾಯ್ದೆ 1960 ರ ಪ್ರಕಾರ ಮೆ. ಜಿಲ್ಲಾ ನೋಂದಣಿ ಅಧಿಕಾರಿಗಳು, ವಿಜಾಪೂರ ಜಿಲ್ಲೆ, ವಿಜಾಪೂರ ಇವರ ಕಚೇರಿಯಲ್ಲಿ ನೋಂದಣಿ ಮಾಡಿಸಲು, ಕಾಗದ ಪತ್ರಗಳನ್ನು ಹಾಜರ ಪಡಿಸಲು ನೋಂದಣಿ ಪ್ರಮಾಣ ಪತ್ರವನ್ನು ಪಡೆಯುವ ಅಧಿಕಾರವನ್ನು ಸಂಘದ ಕಾರ್ಯದರ್ಶಿಗಳಾದ ಶ್ರೀ. ಸಯೀದ ಅಲ್ಮಾಸ ಆರ್. ಮುಲ್ಲಾ, ಇವರಿಗೆ ನೀಡಿ ಸಭೆಯ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

: ಸೂಚಕರು: ಶ್ರೀ. ಎಸ್. ಕೆ. ಪಟ್ಟನಶೆಟ್ಟಿ

: ಅನುಮೋದಕರು: ಶ್ರೀ. ಸಿ. ಬಿ. ಕಬಾಡಗಿ

ಸ್ಥಳ : ಕೃಷಿ ಮಹಾವಿದ್ಯಾಲಯ,
ವಿಜಾಪೂರ ಆವರಣ

ದಿನಾಂಕ :

ಸಹಿ ಆಗಿದೆ
ಅಧ್ಯಕ್ಷರು

President
ALUMNI ASSOCIATIO
College of Agriculture, BIJ

ನಕಲು
ಕಾರ್ಯದರ್ಶಿ

R. Mulla
(S. R. Mulla)

Secretary
ALUMNI ASSOCIATION
College of Agriculture, BIJAPUR

**ನಿವೇದನ ಪತ್ರಿಕೆ**

1) ಸಂಘದ ಹೆಸರು : ಕೃಷಿ ಮಹಾವಿದ್ಯಾಲಯ ಪದವೀಧರ ಸಂಘ ವಿಜಾಪೂರ

2) ಸಂಘದ ವಿಳಾಸ : ಕೃಷಿ ಮಹಾವಿದ್ಯಾಲಯ, ವಿಜಾಪೂರ ಆವರಣ,
ಕೃಷಿ ಮಹಾವಿದ್ಯಾಲಮಯ, ವಿಜಾಪೂರ – 586 101,
ತಾಲೂಕ ಮತ್ತು ಜಿಲ್ಲಾ: ವಿಜಾಪೂರ

3) ಸಂಘದ ಕಾರ್ಯವ್ಯಾಪ್ತಿ : ಕರ್ನಾಟಕದಲ್ಲಿ ಮಾತ್ರ

4) ಸಂಘದ ಉದ್ದೇಶಗಳು :

- ಹಳೆ ವಿದ್ಯಾರ್ಥಿಗಳ ಸಂಘದ ಸದಸ್ಯರ ನಡುವೆ ಸ್ನೇಹ ಮತ್ತು ಸಂಪರ್ಕವನ್ನು ಬೆಳೆಸುವುದು.
- ಕೃಷಿ ಮಹಾವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.
- ಕೃಷಿ ಮಹಾವಿದ್ಯಾಲಯದ ಹಾಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುವುದು.
- ಕೃಷಿ ಮಹಾವಿದ್ಯಾಲಯ ಹಳೆ ವಿದ್ಯಾರ್ಥಿಗಳ ಸಂಘ ಹಾಗೂ ರಾಷ್ಟ್ರೀಯ, ಅಂತರಾಷ್ಟ್ರೀಯ ಕೃಷಿ ಸಂಘ ಸಂಸ್ಥೆಗಳೊಡಿನೆ ಸಂಪರ್ಕ ಜಾಲವನ್ನು ಬೆಳೆಸುವುಸದು.
- ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರ ಸಂಕಿರಣ, ಸಮ್ಮೇಳನ, ಕಾರ್ಯಾಗಾರ, ಕಮ್ಮಟ ಮುಂತಾದವುಗಳನ್ನು ಹಮ್ಮಿಕೊಳ್ಳುವುದು.
- ಕೃಷಿ ಮತ್ತು ಕೃಷಿ ಸಂಬಂಧಿಸಿದ ವಿಷಯಗಳ ಮಾಹಿತಿ, ತಂತ್ರಜ್ಞಾನವುಳ್ಳ ನಿಯತಕಾಲಿಕೆಗಳನ್ನು ಪ್ರಕಟಿಸುವುದು.
- ರೈತರಿಗಾಗಿ ಸಾವಯವ ಕೃಷಿ, ಸಮಗ್ರ ಪೀಡೆ ನಿರ್ವಹಣೆ, ನೀರು ಮತ್ತು ಮಣ್ಣು ಸಂರಕ್ಷಣೆ, ಸಮಗ್ರ ಕೃಷಿ ಪದ್ಧತಿ ಮತ್ತು ಸುಸ್ಥಿರ ಕೃಷಿ, ಆಧುನಿಕ ಬೇಸಾಯ ಪದ್ಧತಿಗಳು ಮುಂತಾದವುಗಳ ಬಗೆಗೆ ತರಬೇತಿಗಳನ್ನು ನಡೆಸುವುದು.
- ನಿರುದ್ಯೋಗಿ ಪದವೀಧರರ ಆರ್ಥಿಕ ಸ್ವಾವಲಂಬನೆಗಾಗಿ ಮತ್ತು ಸ್ವಯಂ ಉದ್ಯೋಗ ಪ್ರಾರಂಭಿಸಲು ಪೂರಕವಾಗುವಂತಹ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.
- ಸಂಘದ ವತಿಯಿಂದ ಕೃಷಿ ವಿಜ್ಞಾನ ಕೇಂದ್ರ, ಕೃಷಿ ಶಾಲೆ, ಕೃಷಿ ತರಬೇತಿ ಮತ್ತು ಕೃಷಿ ಸಂಶೋಧನೆ ಕೇಂದ್ರಗಳನ್ನು ಸ್ಥಾಪಿಸುವುದು.
- ರೈತರ ಅನುಕೂಲಕ್ಕಾಗಿ ಬೀಜ, ಗೊಬ್ಬರ ಕ್ರಿಮಿನಾಶಕ, ಕೃಷಿ ಉಪಕರಣ ಮತ್ತು ಕೃಷಿ ಅಭಿವೃದ್ಧಿಗೆ ಬೇಕಾದ ಇತರ ವಸ್ತುಗಳನ್ನು ಮಾರಾಟ ಮಾಡುವುದು, ತತ್ಸಂಬಂಧವಾಗಿ ಅಗತ್ಯವಾದ ವ್ಯಾಪಾರ ಮಳಿಗೆಗಳನ್ನು ಸೂಕ್ತ ಸ್ಥಳಗಳಲ್ಲಿ ನಿರ್ಮಿಸುವುದು ಅಥವಾ ಬಾಡಿಗೆ ಮೇಲೆ ಪಡೆಯುವ್ವದು / ಕೊಡುವುದು.
- ರೈತರಿಗೆ ಸೂಕ್ತ ಸಮಯದಲ್ಲಿ ಮತ್ತು ಯೋಗ್ಯ ಬೆಲೆಯಲ್ಲಿ ಕೃಷಿಗಾಗಿ ಅಗತ್ಯವಾದ ಉತ್ತಮ ಬೀಜ, ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ, ಜೈವಿಕ ಕೀಟ ನಾಶಕಗಳು, ತೋಟಗಾರಿಕಾ ಸಸಿಗಳು ಮುಂತಾದವುಗಳನ್ನು ಒದಗಿಸಲು ಅವುಗಳ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸುವುದು ಮತ್ತು ಮಾರಾಟ ಮಾಡುವುದು.
- ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯಲು ಕೃಷಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

- ಕೃಷಿ ತೋಟಗಾರಿಕೆ, ಅರಣ್ಯೀಕರಣ, ಹೈನುಗಾರಿಕೆ, ಕೋಳಿಸಾಕಣಿ, ಜೇನುಸಾಕಣೆ, ಮೊಲಸಾಕಣೆ, ಸಾವಯವ ಕೃಷಿ ಹಾಗೂ ಸಮಗ್ರ ಕೃಷಿ ಅಭಿವೃದ್ಧಿ ಮುಂತಾದ ಚಟುವಟಿಕೆಗಳ ಕುರಿತು ಸ್ಪರ್ಧೆಗಳನ್ನು ಏರ್ಪಡಿಸುವುದು ಮತ್ತು ಪ್ರೋತ್ಸಾಹಿಸುವುದು.
- ಕೃಷಿಗೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವ ಕೃಷಿ ವಿಜ್ಞಾನಿಗಳಿಗೆ, ವಿದ್ಯಾರ್ಥಿಗಳಿಗೆ ಸೂಕ್ತ ಧನ ಸಹಾಯ ಮಾಡುವುದು ಮತ್ತು ಹೆಚ್ಚಿನ ವ್ಯಾಸಂಗಕ್ಕೆ ಧನ ಸಹಾಯ ಮಾಡುವ್ಯದು.
- ಸಂಘದ ವತಿಯಿಂದ ಶುಲ್ಕ ಪಾವತಿ ಆಧಾರದ ಮೇಲೆ ವಾಣಿಜ್ಯ ಕೃಷಿ, ಉದ್ಯಾನವನ ರಚನೆ ಬಗೆಗೆ ಸಲಹಾ ಸೇವೆಯನ್ನು ಒದಗಿಸುವುದು.
- ಸಂಘದ ಅಭಿವೃದ್ಧಿಗಾಗಿ ಸಂಘಕ್ಕೆ ಆದಾಯ ದೊರಕಿಸುವ ಸಲುವಾಗಿ ಕಲ್ಯಾಣ ಮಂಟಪ, ಮತ್ತು ವ್ಯಾಪಾರ ಮಳಿಗೆಗಳನ್ನು ನಿರ್ಮಿಸುವುದು.
- ಸದಸ್ಯರ ಮನರಂಜನೆಗಾಗಿ ಅವಕಾಶ ಮಾಡಿಕೊಡಲು ಅಗತ್ಯವಾದ ಕ್ಲಬ್ ಗಳನ್ನು ಸ್ಥಾಪಿಸುವದು ಮತ್ತು ಇದಕ್ಕೆ ಅಗತ್ಯವಾದ ಉದ್ಯಾನವನ, ಈಜುಗೊಳ, ಮತ್ತು ಒಳಾಂಗಣ ಆಟಗಳ ಭವನ ನಿರ್ಮಿಸುವುದು ಮತ್ತು ಪ್ರೋತ್ಸಾಹಿಸುವುದು.
- ಸದಸ್ಯರಿಗೆ ಶೈಕ್ಷಣಿಕ, ವೈಜ್ಞಾನಿಕ, ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಹಾಗೂ ಸರ್ವಾಂಗೀಣ ಉನ್ನತಿಗೆ ಶ್ರಮಿಸುವುದು.
- ಸಂಘದ ವತಿಯಿಂದ ವನಮಹೋತ್ಸವ, ಪಶು ಆರೋಗ್ಯ, ಶುಭ್ರ ಪರಿಸರ ನಿರ್ಮಾಣ, ರಕ್ತದಾನ ನೇತ್ರದಾನ, ಆರೋಗ್ಯ ಶಿಬಿರ ಮೊದಲಾದ ಉಚಿತ ಕಾರ್ಯಕ್ರಮಗಳನ್ನು ನಡೆಸುವುದು.

5) ಸಂಘದ ಉದ್ದೇಶಗಳನ್ನು ಈಡೇರಿಸಲು ಸಂಘವು ವಿವಿಧ ಚಟುವಟಿಕೆಗಳಿಗಾಗಿ ವಂತಿಗೆ/ಅನುದಾನ ನೀಡಲು ಮತ್ತು ವಿವಿಧ ಮೂಲಗಳಿಂದ ವಂತಿಗೆ/ಅನುದಾನ ಪಡೆಯಲು, ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಲು ಮತ್ತು ಸಂಘದ ಬೆಳವಣಿಗೆ ಬಯಸುವ ಹಾಗೂ ಸಹಾಯಕವಾಗುವ ಬೇರೆ ಸಾರ್ವಜನಿಕ ಅಥವಾ ಖಾಸಗಿ ಸಂಘ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರವನ್ನು ಸಂಘವು ಹೊಂದಿರುತ್ತದೆ.

6) ಸಂಘದಲ್ಲಿ ಉತ್ಪತ್ತಿಯಾಗುವ ಆದಾಯವನ್ನು ಸಂಘದ ಉದ್ದೇಶಗಳಿಗಾಗಿ ಮತ್ತು ಸಂಘದ ಅಭಿವೃದ್ಧಿಗಾಗಿ ಮಾತ್ರ ಉಪಯೋಗಿಸುವುದು. ಯಾವುದೇ ಕಾರಣದಿಂದ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ.

7) ಈ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಲು ಹಾಗೂ ನೋಂದಣಾಧಿಕಾರಿಗಳೊಂದಿಗೆ ವ್ಯವರಿಸಲು ಸಂಘದ ಕಾರ್ಯದರ್ಶಿಯವರಾದ ಶ್ರೀ. ಸಯೀದ ಅಲ್ಮಾಸ ಆರ್. ಮುಲ್ಲಾ, ಇವರಿಗೆ ಅಧಿಕಾರ ಕೊಟ್ಟಿದೆ.

ಸಂಘದ ನಿಬಂಧನೆಗಳನ್ವಯ ಅದರ ಅಧಿಕಾರಗಳನ್ನು ಹೊಂದಿರುವ ಪ್ರಥಮ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ಲಗತ್ತಿಸಲಾಗಿದೆ.

# 2009 – 2011 ಸಾಲಿನ ಕಾರ್ಯಕಾರಿ ಸಮಿತಿ ಪಟ್ಟಿ

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಪದಾಧಿಕಾರ |
|---|---|---|---|---|
| 1. | ಶ್ರೀ. ಎಸ್. ಎಸ್. ಕರಬಂತನಾಳ<br>ಕೃಷಿ ವಿಜ್ಞಾನ ಕೇಂದ್ರ, ವಿಜಾಪುರ | 33 | ನೌಕರಿ | ಅಧ್ಯಕ್ಷರು |
| 2. | ಶ್ರೀ. ಮಂಜೂನಾಥ ಆರ್.<br>ನೆಲಮಂಗಲ<br>ಜಿಲ್ಲಾ : ಬೆಂಗಳೂರ ಗ್ರಾಮೀಣ | 29 | ಖಾಸಗಿ | ಉಪಾಧ್ಯಕ್ಷರು |
| 3. | ಶ್ರೀ. ಸಯೀದ ಅಲ್ಮಾಸ ಆರ್. ಮುಲ್ಲಾ<br>ಪ್ರಾದೇಶಿಕ್ ಕೃಷಿ ಸಂಶೋಧನಾ ಕೇಂದ್ರ,<br>ವಿಜಾಪುರ | 34 | ನೌಕರಿ | ಕಾರ್ಯದರ್ಶಿ |
| 4. | ಶ್ರೀ. ಸೋಮನಗೌಡ ಬಿ. ಪಾಟೀಲ<br>ಪ್ರಾದೇಶಿಕ್ ಕೃಷಿ ಸಂಶೋಧನಾ ಕೇಂದ್ರ,<br>ವಿಜಾಪುರ | 25 | ನೌಕರಿ | ಖಜಾಂಚಿ |
| 5. | ಶ್ರೀ. ಮಹಾದೇವ ಅಂಬಲಿ<br>ಹರನಾಳ,<br>ತಾ : ಸಿಂದಗಿ, ಜಿಲ್ಲಾ : ವಿಜಾಪುರ | 26 | ಖಾಸಗಿ | ಸಹ<br>ಕಾರ್ಯದರ್ಶಿ |

| | | | | |
|---|---|---|---|---|
| 6. | ಡಾ. ಅಳಗವಾಡಿ<br>ಡೀನ(ಕೃಷಿ)<br>ಕೃಷಿ ಮಹಾವಿದ್ಯಾಲಯ, ವಿಜಾಪೂರ | 56 | ನೌಕರಿ | ಪದನಿಮಿತ್ತ ಸದಸ್ಯರು |
| 7. | ಡಾ. ಆರ್. ಎಸ್. ಪೊದ್ದಾರ<br>ಕೃಷಿ ಮಹಾವಿದ್ಯಾಲಯ, ವಿಜಾಪೂರ | 42 | ನೌಕರಿ | **ಸಂಯೋಜನಾಧಿಕಾರಿ** |
| 8. | ಶ್ರೀ. ದಯಾಸಾಗರ ಬಿ. ಪಾಟೀಲ<br>ಅಥರ್ಗಾ,<br>ತಾ : ಇಂಡಿ, ಜಿಲ್ಲಾ : ವಿಜಾಪೂರ | 36 | ಖಾಸಗಿ | ಸದಸ್ಯರು |
| 9. | ಶ್ರೀ. ಸಿ. ಬಿ. ಕಬಾಡಗಿ<br>ಪ್ರಾದೇಶಿಕ್ ಕೃಷಿ ಸಂಶೋಧನಾ ಕೇಂದ್ರ,<br>ವಿಜಾಪುರ | 35 | ನೌಕರಿ | ಸದಸ್ಯರು |
| 10. | ಶ್ರೀ. ಎಸ್. ಜಿ. ಗೊಳ್ಳಗಿ<br>ಕೃಷಿ ವಿಜ್ಞಾನ ಕೇಂದ್ರ. ವಿಜಾಪುರ | 33 | ನೌಕರಿ | ಸದಸ್ಯರು |
| 11. | ಶ್ರೀ. ಸಂತೋಷ ಕೆ. ಪಟ್ಟಣಶೆಟ್ಟಿ<br>ಕೃಷಿ ಮಹಾವಿದ್ಯಾಲಯ ವಿಜಾಪೂರ | 32 | ನೌಕರಿ | ಸದಸ್ಯರು |

| | | | | |
|---|---|---|---|---|
| 12. | ಶ್ರೀ. ಗುರು ಎಸ್. ಯಡಹಳ್ಳಿ<br>ಕೃಷಿ ವಿಜ್ಞಾನ ಕೇಂದ್ರ. ಗಂಗಾವತಿ | 31 | ನೌಕರಿ | ಸದಸ್ಯರು |
| 13. | ಶ್ರೀ. ಮಹಾಂತೇಶ ಶಿರೂರ<br>ಕಲಗುರ್ಕಿ,<br>ತಾ : ಬಸವನ ಬಾಗೇವಾಡಿ,<br>ಜಿಲ್ಲಾ : ವಿಜಾಪುರ | 30 | ನೌಕರಿ | ಸದಸ್ಯರು |
| 14. | ಶ್ರೀಮತಿ. ಸುಶ್ಮಾ ಮಾಲಿಪಾಟೀಲ<br>ಆನಂದ ನಗರ, ಆಶ್ರಮ ರಸ್ತೆ,<br>ವಿಜಾಪುರ | 28 | ಗ್ರಹಣಿ | ಸದಸ್ಯರು |
| 15. | ಶ್ರೀ. ವಿಜಯಕುಮಾರ ಬಿರಾದಾರ<br>ಕಲ್ಲಹನಗರಗ<br>ತಾ : ಜಿವರ್ಗಿ, ಜಿಲ್ಲಾ : ಗುಲಬರ್ಗಾ | 27 | ನೌಕರಿ | ಸದಸ್ಯರು |
| 16. | ವೆಂಕಟೇಶ ದೇಶಪಾಂಡೆ<br>ಮುಳವಾಡ,<br>ತಾ : ಬಸವನ ಬಾಗೇವಾಡಿ,<br>ಜಿಲ್ಲಾ : ವಿಜಾಪುರ | 24 | ವಿದ್ಯಾರ್ಥಿ | ಸದಸ್ಯರು |
| 17. | ಅನೀಲ ಜಾಧವ<br>ಪೊ: ಹಿಟ್ಟನಹಳ್ಳಿ (LT)<br>ತಾ : ಸಿಂದಗಿ<br>ಜಿಲ್ಲಾ : ವಿಜಾಪುರ | 23 | ವಿದ್ಯಾರ್ಥಿ | ಸದಸ್ಯರು |

ಸಾಕ್ಷಿಗಳು

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಸಹಿ |
|---|---|---|---|---|
| 1) | ಶ್ರೀ. ಎಸ್. ಪಿ. ನ್ಯಾಮಗೌಡ<br>ಜಿಲ್ಲಾ ನೋಂದಣಿ ಅಧಿಕಾರಿಗಳು<br>ವಿಜಾಪುರ | 34 | ನೋಂದಣಿ ಅಧಿಕಾರಿಗಳು | [signature] |
| 2) | ಶ್ರೀ. ಜೆ. ಆರ್. ಹಿರೇಮಠ<br>ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ,<br>ವಿಜಾಪುರ | 32 | ನೌಕರ | [signature] |

## ಕೃಷಿ ಮಹಾವಿದ್ಯಾಲಯ ಪದವೀಧರ ಸಂಘ ವಿಜಾಪೂರ ನಿಬಂಧನೆಗಳು

ಈ ನಿಬಂಧನೆಗಳು ಸಂಘದ ನಿವೇದನಾ ಪತ್ರಿಕೆಯಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವದಕ್ಕೆ ರಚಿಸಲ್ಪಟ್ಟಿರುತ್ತವೆ.

**1) ಸದಸ್ಯತ್ವ**

ಎ) ಕೃಷಿ ಮಹಾವಿದ್ಯಾಲಯ ವಿಜಾಪೂರದಿಂದ ಸ್ನಾತಕ, ಸ್ನಾತಕೋತ್ತರ, ಡಾಕ್ಟರೇಟ ಅಥವಾ ಡಿಪ್ಲೋಮಾ ಪದವಿ ಪಡೆದಿದ್ದು, ಸಂಘದ ಉದ್ದೇಶಗಳನ್ನು ಅಂಗೀಕರಿಸಿ, ಸಂಘದೊಡನೆ ಸಹಕರಿಸುವ ಸರ್ವರಿಗೂ ಸಂಘದ ಸದಸ್ಯತ್ವವನ್ನು ಪಡೆಯಲು ಅವಕಾಶವಿರುತ್ತದೆ.

ಬಿ) ಸಂಘದ ಸದಸ್ಯತ್ವದ ವರ್ಗವು ಈ ಕೆಳಕಂಡಂತೆ ಇರುತ್ತದೆ.

| | |
|---|---|
| 1) ವಾರ್ಷಿಕ ಸದಸ್ಯತ್ವ | ರೂ.250–00 |
| 2) ಅಜೀವ ಸದಸ್ಯತ್ವ | ರೂ.3,000–00 |
| 3) ಮಹಾಪೋಷಕರು | ರೂ.50,000–00 ಮೆಲ್ಪಟ್ಟು |
| 4) ಪೋಷಕರು | ರೂ.10,000–00 ಮೆಲ್ಪಟ್ಟು |
| 5) ಗೌರವ ಸದಸ್ಯರು* | ರೂ. ವಂತಿಗೆ ಇಲ್ಲಾ |

* **ಸಂಘದ ಕಾರ್ಯಕಾರಿ ಸಮಿತಿ ದೃಷ್ಟಿಯಲ್ಲಿ, ಸಂಘದ ಚಟುವಟಿಕೆಗಳಿಗೆ ಪೂರಕವಾಗುವ ಘನ ವ್ಯಕ್ತಿತ್ವ ಮತ್ತು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಉನ್ನತ ವ್ಯಕ್ತಿಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ ಗಣ್ಯರನ್ನು ಗೌರವ ಸದಸ್ಯರನ್ನಾಗಿ ನಾಮಕರಣದ ಮುಖಾಂತರ ನಿರ್ಧಿಷ್ಠ ಅವಧಿಗೆ ನೇಮಿಸಬಹುದಾಗಿದೆ.**

ಸಿ) ಸಂಘದ ಸದಸ್ಯತ್ವ ಬಯಸುವ ವ್ಯಕ್ತಿಗಳು ಸದಸ್ಯತ್ವದ ಚಂದಾ ಹಣದೊಡನೆ ತಾನು ಕೃಷಿ ಮಹಾವಿದ್ಯಾಲಯ ವಿಜಾಪುರದಿಂದ ಪಡೆದಿರುವ ಪದವಿಯ ಮಾಹಿತಿ/ಲಭ್ಯವಿರುವ ಅಧಿಕೃತ ದಾಖಲೆಯೊಂದಿಗೆ ಸಂಘಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಸದಸ್ಯರನ್ನಾಗಿ ಮಾಡಿಕೊಳ್ಳುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರುತ್ತದೆ. ಅರ್ಜಿಯನ್ನು ತಿರಸ್ಕರಿಸದರೆ ಸದರಿ ಅರ್ಜಿದಾರರಿಗೆ ಕಾರಣಗಳನ್ನು ತಿಳಿಸತಕ್ಕದ್ದು, ಅರ್ಜಿದಾರನು/ಳು ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅದರ ತಿರ್ಮಾನವು ಅಂತಿಮ.

**2) ಸದಸ್ಯರ ಹಕ್ಕು ಬಾಧ್ಯತೆಗಳು**

ಸಂಘದ ಸದಸ್ಯತ್ವದ ಅಂಗೀಕಾರವಾದ ದಿನದಿಂದ ಸಂಘವು ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳಿಗೆ ಎಲ್ಲಾ ಸದಸ್ಯರಿಗೆ ಉಚಿತ ಪ್ರವೇಶವಿರುತ್ತದೆ. ಸಂಘದ ವಾರ್ಷಿಕ ಸಭೆಯ ಚುನಾವಣೆಯಲ್ಲಿ ಭಾಗವಹಿಸಲು ಮತ್ತು ಸ್ಪರ್ಧಿಸಲು ಗೌರವ ಸದಸ್ಯರನ್ನು ಹೊರತು ಪಡಿಸಿ ಉಳಿದ ಎಲ್ಲಾ ಸದಸ್ಯರಿಗೆ ಅಧಿಕಾರ ಇರುವುದು.

**3) ಸದಸ್ಯತ್ವದ ವಜಾ**

ಯಾವುದೇ ಸದಸ್ಯರು ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಾರೆಂದು ಕಂಡು ಬಂದರೆ ಅವರಿಗೆ ಕನಿಷ್ಠ ಪಕ್ಷ 7 ದಿನಗಳ ನೋಟೀಸನ್ನು ಕೊಟ್ಟು ಕಾರ್ಯಕಾರಿ ಸಮಿತಿಯು ಅವರ ಸದಸ್ಯತ್ವವನ್ನು ವಜಾ ಮಾಡಬಹುದು. ಇಂತಹ ಸದಸ್ಯರು ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸುವ ಅಧಿಕಾರ ಇರುವುದು.

**4) ಸದಸ್ಯತ್ವ ನಿಂತು ಹೋಗುವುದು**

ಮರಣ ಹೊಂದಿದರೆ, ಬುದ್ಧಿ ಭ್ರಮಣೆಯಾದರೆ, ಸದಸ್ಯತ್ವದಿಂದ ವಜಾ ಮಾಡಲ್ಪಟ್ಟರೆ ಮತ್ತು ರಾಜೀನಾಮೆ.

**5) ಸದಸ್ಯರ ಪುಸ್ತಕ**

ಸಂಘದಲ್ಲಿ ಸದಸ್ಯರ ಪುಸ್ತಕಗಳನ್ನು ಇಡತಕ್ಕದ್ದು ಮತ್ತು ಅದರಲ್ಲಿ ಸದಸ್ಯರ ಹೆಸರು, ಸಂಪರ್ಕ ಮಾಹಿತಿ, ವಯಸ್ಸು, ಉದ್ಯೋಗ ಮೊದಲಾದ ವಿವರಗಳನ್ನು ನಮೂದಿಸತಕ್ಕದ್ದು, ಖಾತೆ ಪುಸ್ತಕ, ಸಭೆಗಳ ನಡುವಳಿಕೆ ಪುಸ್ತಕ, ಆಸ್ತಿ ಮತ್ತು ಷೇರುಗಳ ಪುಸ್ತಕಗಳನ್ನು ಇಡತಕ್ಕದ್ದು.

**6) ಕಾರ್ಯಕಾರಿ ಸಮಿತಿ, ಸಮಿತಿ ಅವಧಿ, ಆಯ್ಕೆ ಮತ್ತು ಸಮಿತಿ ಸಭೆ**

ಎ) ಸಂಘದ ಆಡಳಿತವನ್ನು ನಡೆಸುವದಕ್ಕಾಗಿ 15 ಜನ ಸದಸ್ಯರ ಕಾರ್ಯಕಾರಿ ಸಮಿತಿಯು ಇರುತ್ತದೆ. ಈ ಸಮಿತಿಯ ಅವಧಿ ಮೂರು ವರ್ಷ.

ಬಿ) ಕಾರ್ಯಕಾರಿ ಸದಸ್ಯರನ್ನು ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಕೈ ಎತ್ತುವುದರ ಅಥವಾ ಗುಪ್ತ ಮತದಾನದ ಮೂಲಕ ಆರಿಸುವುದು.

ಸಿ) ಕಾರ್ಯಕಾರಿ ಸಮಿತಿಗೆ ಚುನಾಯಿತರಾದ ಸದಸ್ಯರು, ಸರ್ವ ಸದಸ್ಯರ ಸಭೆ ಜರುಗಿದ 8 ದಿವಸಗಳೊಳಗಾಗಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ ಮತ್ತು ಖಜಾಂಚಿ ಮತ್ತು 10 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆರಿಸಿಕೊಳ್ಳುವುದು. ನಿರ್ಗಮಿಸುವ ಕಾರ್ಯದರ್ಶಿಯು ಆಗಮಿಸುವ ಕಾರ್ಯದರ್ಶಿಗೆ ಕೂಡಲೆ ಸಂಘದ ಎಲ್ಲ ಚಾರ್ಜನ್ನು ವಹಿಸಿಕೊಡತಕ್ಕದ್ದು ಮತ್ತು ಚಾರ್ಜ ಪಟ್ಟಿಯನ್ನು ನಡುವಳಿಗಳ ಪುಸ್ತಕದಲ್ಲಿ ಬರೆಯತಕ್ಕದ್ದು.

ಡಿ) ಕಾರ್ಯಕಾರಿ ಸಮಿತಿಯ ಯಾವ ಒಬ್ಬ ಸದಸ್ಯರು ಅಧ್ಯಕ್ಷರ ಗಮನಕ್ಕೆ ತರದೇ ಸತತ 3 ಸಭೆಗೆ ಗೈರು ಹಾಜರಾದರೆ ಅಂತಹವರನ್ನು ಕಾರ್ಯಕಾರಿ ಸಮಿತಿಯಿಂದ ತೆಗೆಯಬಹುದು ಮತ್ತು ತೆರವಾದ ಸ್ಥಾನಕ್ಕೆ ಸಂಘದ ಇತರ ಸದಸ್ಯರಲ್ಲಿ ಯಾರೊಬ್ಬರನ್ನಾದರೂ ಕೋ ಆಪ್ಟ ಮಾಡಿ ಇನ್ನುಳಿದ ಅವಧಿಗೆ ನೇಮಿಸಿಕೊಳ್ಳುವ ಹಕ್ಕು ಕಾಯಾಕಾರಿ ಸಮಿತಿಗೆ ಇರುತ್ತದೆ.

ಇ) ಅವಶ್ಯಕತೆ ಕಂಡಾಗ ಕಾರ್ಯಕಾರಿ ಸಮಿತಿ ಸಂಘದ ವಿವಿಧ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ತಮ್ಮಲ್ಲಿಯೇ ಆಗಲಿ ಇತರೇ ಸದಸ್ಯರಿಂದ ಆಗಲಿ ಕೂಡಿದ ಉಪ ಸಮಿತಿಯನ್ನು ರಚಿಸಬಹುದು.

ಎಫ್) ಕಾರ್ಯಕಾರಿ ಸಮಿತಿಯ ಬೇಕಾದಾಗ ಸಭೆ ಸೇರಬಹುದು, ಆಧರೆ ಕನಿಷ್ಠ 3 ತಿಂಗಳಿಗೆ ಒಂದು ಸಲವಾದರೂ ಸೇರಲೇಬೇಕು.

ಜಿ) ಅವಶ್ಯಕ ಸಂಖ್ಯೆ (ಕೋರಂ) : ಕಾರ್ಯಕಾರಿ ಸಮಿತಿ ಸಭೆಗೆ ಸಮಿತಿಯ ½ ರಷ್ಟು (ಅರ್ಧದಷ್ಟು) ಜನರು ಹಾಜರಿದ್ದರೆ ಕೋರಂ ಆಗುತ್ತದೆ. ಕೋರಂ ಆದರೆ ಮಾತ್ರ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು, ಇಲ್ಲದಿದ್ದರೆ ಸಭೆಯನ್ನು ಒಂದು ಗಂಟೆಗೆ ಮುಂದೂಡಬೇಕು. ಮುಂದೂಡಿದ ಸಭೆಗೆ ಕೋರಂ ಅವಶ್ಯಕತೆ ಇಲ್ಲಾ.

ಎಚ್) ನೋಟೀಸ್ : ಕಾರ್ಯಕಾರಿ ಸಮಿತಿ ಸಭೆ ಕರೆಯಲು ಕನಿಷ್ಟ 7 ದಿನಗಳ ಅವಧಿಯ ನೋಟಿಸನ್ನು ಕೊಡತಕ್ಕದ್ದು. ಆದರೆ ತುರ್ತು ಸಂದರ್ಭಗಳಲ್ಲಿ ಕೂಡಲೇ ಸಭೆಯನ್ನು ಕರೆಯಬಹುದು.

ಐ) ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಲ್ಲ ವಿಷಯಗಳು ಹಾಜರಿದ್ದ ಸದಸ್ಯರ ಬಹುಮತದಿಂದ ತಿರ್ಮಾನಿಸತಕ್ಕದ್ದು. ಆಧರೆ ಯಾವುದೇ ವಿಷಯದಲ್ಲಿ ಸಮ ಮತಗಳು ಬಿದ್ದಾಗ, ಸಭೆಯ ಅಧ್ಯಕ್ಷರಿಗೆ ಒಂದು ಹೆಚ್ಚಿನ ಮತವಿರುತ್ತದೆ.

ಜೆ) ಕಾರ್ಯಕಾರಿ ಸಮಿತಿಯ ಸದಸ್ಯರಿಂದ, ದಾನಿಗಳಿಂದ ಚಂದಾ, ವಂತಿಗೆ, ಕೊಡುಗೆ, ದಾನ, ಅನುದಾನ ಇತ್ಯಾದಿಗಳನ್ನು ಸ್ವೀಕರಿಸುವ ಅಧಿಕಾರ ಇರುವುದು.

**7) ಸರ್ವ ಸದಸ್ಯರ ಸಭೆ :**

ಎ) ಸರ್ವ ಸದಸ್ಯರ ಸಭೆ ಸಂಘದ ಎಲ್ಲ ಸದಸ್ಯರನ್ನು ಒಳಗೊಂಡಿರುತ್ತದೆ. ಸರ್ವ ಸದಸ್ಯರ ವಾರ್ಷಿಕಸಭೆ ಮತ್ತು ವಿಶೇಷ ಸಭೆ ಎಂದು ಎರಡು ವಿಧಗಳಿರುತ್ತವೆ. ಸರ್ವಸದಸ್ಯರ ವಾರ್ಷಿಕ ಸಭೆಯನ್ನು ಪ್ರತಿ ವರ್ಷ ಹಣಕಾಸು ವರ್ಷದ ಅವಧಿ ಮುಗಿದ 3 ತಿಂಗಳೊಳಗಾಗಿ ಅಂದರೆ ಪ್ರತಿ ವರ್ಷ ಜೂನ್ ತಿಂಗಳೊಳಗಾಗಿ ನಡೆಸತಕ್ಕದ್ದು. ವಿಶೇಷ ಸಭೆಯನ್ನು ಕಾರ್ಯಕಾರಿ ಸಮಿತಿ ಬೇಕಾದಾಗ ಕರೆಯಬಹುದು.

ಬಿ) ಸರ್ವ ಸದಸ್ಯರ ಸಭೆಯ ತಿಳಿವಳಿಕೆ ಪತ್ರ (ನೋಟಿಸ್)ಗಳನ್ನು ಸಭೆ ಸೇರುವುದಕ್ಕೆ 21 ದಿನ ಮುಂಚಿತವಾಗಿ ಕಳುಹಿಸತಕ್ಕದ್ದು. ತಿಳವಳಿಕೆ ಪತ್ರದಲ್ಲಿ ಸಭೆ ಸೇರತಕ್ಕ ಸ್ಥಳ, ದಿನಾಂಕ, ವೇಳೆ ಮತ್ತು ಚರ್ಚಿಸತಕ್ಕ ವಿಷಯಗಳನ್ನು ನಮೂದಿಸತಕ್ಕದ್ದು. ತಿಳುವಳಿಕೆ ಪತ್ರವನ್ನು ಸದಸ್ಯರ ಪುಸ್ತಕದಲ್ಲಿರುವ ವಿಳಾಸಕ್ಕೆ ಕಳುಹಿಸಲಾಗುವುದು, ಸದಸ್ಯರು ತಮ್ಮ ವಿಳಾಸದಲ್ಲಿ ಬದಲಾವಣೆಯಾದುದನ್ನು ಕಾಲ ಕಾಲಕ್ಕೆ ತಿಳಿಸಿ ಸರಿಪಡಿಸದಿದ್ದರೆ, ತಿಳುವಳಿಕೆ ಪತ್ರವನ್ನು ಸಂಘದ ಪುಸ್ತಕದಲ್ಲಿ ಲಭ್ಯವಿರುವ ವಿಳಾಸಕ್ಕೆ ಮಾತ್ರ ಕಳುಹಿಸಲಾಗುವುದು. ತಿಳುವಳಿಕೆ ಪತ್ರ ತಲುಪದಿದ್ದರೆ ಸಂಘ ಜವಾಬ್ದಾರಿಯಾಗುವದಿಲ್ಲ ಮತ್ತು ಯಾರಿಗಾದರೂ ನೋಟಿಸ್ ತಲುಪಿರುವದಿಲ್ಲ ಎಂಬ ಒಂದೇ ಕಾರಣದಿಂದ ಸಭೆಯ ಕಾರ್ಯಕಲಾಪಗಳು ಅಸಿಂಧುವಾಗಲಾರವು.

ಸಿ) ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಹಿಂದಿನ ಆಡಳಿತ ವರದಿ, ಚಾಟರ್ಡ ಅಕೌಂಟೆಂಟ್ ರವರಿಂದ ಆಡಿಟ್ ಆಗಿರುವ ವರ್ಷದ ಲೆಕ್ಕ ಪತ್ರಗಳು, ಆಯವ್ಯಯದ ಮುಂಗಡ ಕರಡು ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆ (ಮೂರು ವರ್ಷಕ್ಕೊಮ್ಮೆ) ಮತ್ತು ನೋಟಿಸನಲ್ಲಿ ನಮೂದಿಸಿದ ವಿಷಯಗಳನ್ನ ಚರ್ಚಿಸಿ ಅನುಮೋದಿಸುವುದು.

ಡಿ) ಅವಶ್ಯಕ ಸಂಖ್ಯೆ (ಕೋರಂ): ಸರ್ವ ಸದಸ್ಯರ ಸಭೆಯಲ್ಲಿ ಒಟ್ಟು ಸದಸ್ಯರ 3 ನೇ 1 ಭಾಗ ಅಥವಾ 50 ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅದು, ಇರುತ್ತಿದೆಯೋ ಅಷ್ಟು ಸದಸ್ಯರು ಹಾಜರಿದ್ದರೆ ಕೋರಂ ಆಗುತ್ತದೆ. ಅವಶ್ಯ ಸಂಖ್ಯೆಯಷ್ಟು ಸದಸ್ಯರು ಅರ್ಧ ಗಂಟೆಯಲ್ಲಿ ಹಾಜರಾಗದಿದ್ದರೆ, ಸಭೆಯನ್ನು ಒಂದು ಗಂಟೆ ಮುಂದೂಡಬೇಕು. ಮುಂದೂಡಿದ ಸಭೆಗೆ ಕೋರಂ ಅವಶ್ಯವಿಲ್ಲ ಮತ್ತು ಹಾಜರಿದ್ದ ಸದಸ್ಯರು ಸಭೆಗೆ ನಮೂದಿಸಿದ ವಿಷಯಗಳನ್ನು ಚರ್ಚಿಸಿ ತಿರ್ಮಾನಿಸಲು ಸರ್ವ ಸದಸ್ಯರ ಸಭೆಗೆ ಅಧಿಕಾರ ಇರುತ್ತದೆ.

ಇ) ಸರ್ವ ಸದಸ್ಯರ ಸಭೆಯಲ್ಲಿ ಎಲ್ಲ ವಿಷಯಗಳು ಹಾಜರಿದ್ದ ಸದಸ್ಯರ ಬಹುಮತದಿಂದ ತಿರ್ಮಾನಿಸತಕ್ಕದ್ದು. ಯಾವುದೇ ವಿಷಯದ ಬಗ್ಗೆ ಸಮ ಮತಗಳು ಬಿದ್ದಾಗ, ಸಭೆಯ ಅಧ್ಯಕ್ಷರಿಗೆ ಒಂದು ಹೆಚ್ಚಿನ ಮತವಿರುತ್ತದೆ.

ಎಫ್) ಕಾರ್ಯಕಾರಿ ಸಮಿತಿ ನೇಮಕ

**8) ಸಂಘದ ನಿಧಿ/ಹಣಕಾಸು**

ಎ) ಸಂಘದ ಅಜೀವ ಸದಸ್ಯತ್ವದ ಶುಲ್ಕ, ಸದಸ್ಯರಿಂದ ಅಥವಾ ಇತರ ದಾನಿಗಳಿಂದ ಬಂದ ವಂತಿಗೆ/ದಾನ, ಸರಕಾರಿ, ಅರೆಸರಕಾರಿ, ಸ್ವಾಯತ ಸಂಸ್ಥೆ, ಸ್ವಯಂ ಸೇವಾ ಸಂಘ ಹಾಗೂ ಖಾಸಗಿ ಮೂಲಗಳಿಂದ ಬಂದ ಅನುದಾನಗಳು ಮತ್ತು ಸಹಾಯಧನ ಮತ್ತು ಸಂಘದ ವಾಣಿಜ್ಯ ಚಟುವಟಿಕೆಗಳಿಂದ ಬಂದ ನಿವ್ವಳ ಆದಾಯ ಇವು ಸಂಘದ ನಿಧಿಗಳಾಗಿ ಪರಿಗಣಿಸಲ್ಪಡುತ್ತವೆ.

ಬಿ) ಸಂಘದ ನಿಧಿಯನ್ನು, ಸಂಘದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ದೃಷ್ಟಿಯಿಂದ ಆಯೋಜಿಸಿದ ಎಲ್ಲಾ ಚಟುವಟುಕೆಗಳಿಗೆ ಕಾರ್ಯಕಾರಿ ಸಮಿತಿ ಸೂಕ್ತವೆಂದು ನಿರ್ಣಯಿಸಿ ವಿನಿಯೋಗಿಸಬಹುದು.

**9) ಲೆಕ್ಕ ಪತ್ರಗಳ ಮತ್ತು ಹಣಕಾಸು ವರ್ಷ**

ಎ) ಸಂಘದ ಆಡಳಿತ ಮತ್ತು ಹಣಕಾಸಿನ ವರ್ಷವು ಏಪ್ರಿಲ್ 1 ರಿಂದ ಮಾರ್ಚ 31ರ ವರೆಗೆ ಇರುತ್ತದೆ.
ಬಿ) ಕಾರ್ಯಕಾರಿ ಸಮಿತಿಯು ಒಬ್ಬ ಲೆಕ್ಕ ತಪಾಸಣಾಧಿಕಾರಿಯನ್ನು ನೇಮಿಸುವುದು. ಅಂತಹವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿರಬಾರದು.
ಸಿ) ಲೆಕ್ಕಪತ್ರಗಳನ್ನು ಲೆಕ್ಕಪತ್ರಗಳ ತಪಾಸಣಾಧಿಕಾರಿಗಳು ಪ್ರತಿ ವರ್ಷ ಆಸ್ತಿ ಜವಾಬ್ದಾರಿ ತ:ಖ್ತೆಗಳನ್ನು ಪರಿಶೀಲಿಸಿ ಲೆಕ್ಕ ಪತ್ರಗಳನ್ನು ತಯಾರಿಸುವುದು ಮತ್ತು ಅದನ್ನು ವಾರ್ಷಿಕ ಸಭೆಗೆ ಒಪ್ಪಿಸುವುದು.

ಡಿ) ಸಂಘದ ಲೆಕ್ಕಗಳ ಬಗ್ಗೆ ವಿವರಣೆಯನ್ನು ಸಂಘದ ಸದಸ್ಯರಲ್ಲಿ ಯಾರೇ ಆಗಲಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಯವರ ಮೂಲಕ ಪಡೆಯಬಹುದು.

ಇ) ಸಂಘದ ಹೆಸರಿನಲ್ಲಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ಆ ಖಾತೆಯಲ್ಲಿ ಸಂಘದ ಹಣವನ್ನು ಜಮಾ ಮಾಡಿ ಸಂಘದ ಕಾರ್ಯಕ್ರಮಗಳಿಗೆ ಹಣ ಬೇಕಾದಾಗ ಸಂಘದ ಕಾರ್ಯದರ್ಶಿ ಮತ್ತು ಖಜಾಂಚಿಯವರ ಜಂಟಿ ಸಹಿಯೊಡನೆ ಹಣವನ್ನು ಪಡೆಯಬಹುದು.

**10) ವಾರ್ಷಿಕ ಲೆಕ್ಕ ಪತ್ರ ಮತ್ತು ನೋಂದಣಾಧಿಕಾರಿಯವರಿಗೆ ಸಲ್ಲಿಸುವುದು**

ಎ) ವರ್ಷದ ಕೊನೆ ನಂತರ ವಾರ್ಷಿಕ ಲೆಕ್ಕಪತ್ರಗಳನ್ನು ಕಾರ್ಯದರ್ಶಿಯು ತಯಾರಿಸಿಕೊಂಡು 1956ರ ಕಂಪನಿಗಳ ಕಾಯಿದೆಯ 296 ನೇ ವಿಧಿಗಳನ್ವಯ ಅಧಿಕಾರ ಪಡೆದ ಆಡಿಟ್ ರವರಿಂದ ಆಡಿಟ್ ಮಾಡಿಸಿಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಬೇಕು.

ಬಿ) ವಾರ್ಷಿಕ ಸಭೆಯ ಅನುಮತಿ ಪಡೆದ 14 ದಿನಗಳೊಳಗಾಗಿ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿಯೊಂದಿಗೆ ವಾರ್ಷಿಕ ಲೆಕ್ಕಗಳನ್ನು ಕಾರ್ಯದರ್ಶಿಯ ನೋಂದಣಾಧಿಕಾರಿಯವರಿಗೆ ಕಳುಹಿಸತಕ್ಕದ್ದು.

**11) ನಿಬಂಧನೆಗಳ ತಿದ್ದುಪಡಿ**

1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ ಕಲಂ 9 ಮತ್ತು 10 ರ ವಿಧಿಗಳನ್ವಯ ಕ್ರಮಕೈಗೊಂಡು ನಿಬಂಧನೆಗಳನ್ನು ಅವಶ್ಯವೆನಿಸಿದರೆ ಬದಲಾಯಿಸಬಹುದು ಮತ್ತು ಬದಲಾಯಿಸುವ ಅಧಿಕಾರ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ, ಸಭೆಗೆ ಹಾಜರಿದ್ದ ಮೂರನೆಯ ಒಂದು ಭಾಗದಷ್ಟು ಸದಸ್ಯರು ಒಪ್ಪಿಗೆ ಕೊಟ್ಟಾಗ ಮಾತ್ರ ಅಂತಹ ತಿದ್ದುಪಡಿ ಅಳವಡಿಸಿಕೊಳ್ಳಬಹುದು. ಇಂತಹ ತಿದ್ದುಪಡಿಯು ನೋಂದಣಾಧಿಕಾರಿಯವರಿಂದ ಅನುಮತಿ ಪಡೆದ ಮೇಲೆ ಮಾತ್ರ ಜಾರಿಯಲ್ಲಿ ಬರುತ್ತದೆ.

**12) ಸಂಯೋಜನೆ**

1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 21 ನೇ ವಿಧಿಗಳನ್ವಯ ಕ್ರಮ ಕೈಗೊಂಡು ಬೇರಾವುದೇ ನೋಂದಣಿಯಾಗಿರುವ ಸಂಸ್ಥೆಯಲ್ಲಿ ಕೂಡಿಕೊಳ್ಳಬಹುದು.

**13) ವಿಸರ್ಜನೆ**

ಸಂಘವನ್ನು 1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ ಕಲಂ 22 ಮತ್ತು 23 ನೇ ವಿಧಿಗಳನ್ವಯ ಕ್ರಮ ಕೈಗೊಂಡು ವಿಸರ್ಜಿಸಬಹುದು.

**14) ಪದಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯ**

**ಅಧ್ಯಕ್ಷರು :** ಸಂಘಕ್ಕೆ ಸಂಬಂಧಪಟ್ಟಂತೆ ಎಲ್ಲಾ ಸಭೆಗಳನ್ನು ನಡೆಸುವುದು. ಸಂಘಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ನಡೆಸುವುದು. ನಿರ್ಣಾಯಕ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ವಿಶೇಷ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯುವ ಅಧಿಕಾರ ಇರುವುದು.

**ಉಪಾಧ್ಯಕ್ಷರು :** ಸಂಘದ ದಿನನಿತ್ಯದ ಕೆಲಸಗಳಲ್ಲಿ ಅಧ್ಯಕ್ಷರಿಗೆ ಸಹಾಯ ಮಾಡುವುದು ಮತ್ತು ಅವರ ಗೈರು ಹಾಜರಿಯಲ್ಲಿ ಅಧ್ಯಕ್ಷರ ಕರ್ತವ್ಯ ನಿರ್ವಹಿಸುವುದು.

**ಕಾರ್ಯದರ್ಶಿ:** ಕಾರ್ಯದರ್ಶಿಯವರು ಕಾರ್ಯಕಾರಿ ಸಮಿತಿಯ ವಾರ್ಷಿಕ ಮಹಾಸಭೆ ಮತ್ತು ಸದಸ್ಯರ ಇತರ ಸಭೆಗಳನ್ನು ಏರ್ಪಡಿಸುವುದು, ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನವಾದಂತಹ ನಿರ್ಧಾರಗಳನ್ನು ಅನುಷ್ಠಾನಗೊಲಿಸುವುದು, ಸಂಬಂಧಪಟ್ಟ ಇಲಾಖೆಗಳೊಡನೆ ವ್ಯವಹರಿಸುವುದು. ಸಂಘದ

ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮತ್ತು ಬ್ಯಾಂಕಿನ, ಹಣಕಾಸಿನ ವ್ಯವಹಾರಗಳನ್ನು ನೋಡಿಕೊಳ್ಳುವುದು.

**ಸಹಕಾರ್ಯದರ್ಶಿ:** ಸಂಘದ ದಿನನಿತ್ಯ ಕೆಲಸಗಳಲ್ಲಿ ಕಾರ್ಯದರ್ಶಿಯವರಿಗೆ ಸಹಾಯ ಮಾಡುವುದು ಮತ್ತು ಕಾರ್ಯದರ್ಶಿಯವರ ಗೈರು ಹಾಜರಿಯಲ್ಲಿ ಅವರ ಎಲ್ಲ ಕೆಲಸಗಳನ್ನು ನಿರ್ವಹಿಸುವುದು.

**ಖಜಾಂಚಿ:** ಸದಸ್ಯರಿಂದ, ದಾನಿಗಳಿಂದ ಚಂದಾ, ವಂತಿಕೆ, ಕೊಡುಗೆ ಇತ್ಯಾದಿಗಳನ್ನು ಸ್ವೀಕರಿಸಿ ಅವರಿಗೆ ರಶೀದಿಯನ್ನು ನೀಡುವುದು, ಬಂದಂತಹ ಹಣವನ್ನು ಬ್ಯಾಂಕಿಗೆ ಜಮಾ ಮಾಡುವುದು ಅದಕ್ಕೆ ಸಂಬಂಧಪಟ್ಟ ರಶೀದಿಗಳನ್ನು ಕಾರ್ಯದರ್ಶಿಯವರಿಗೆ ಒಪ್ಪಿಸುವುದು. ಸಂಘದ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.

**ಸದಸ್ಯ :** ಕೃಷಿ ಮಹಾ ವಿದ್ಯಾಲಯ ವಿಜಾಪೂರದಿಂದ ಸ್ನಾತಕ, ಸ್ನಾತಕೋತರ, ಡಾಕ್ಟರೇಟ್ ಹಾಗೂ ಡಿಪ್ಲೋಮಾ ಪದವಿ ಪಡೆದಿದ್ದು, ಸಂಘದ ಸದಸ್ಯನಾಗಿರುತ್ತಾನೆ.

**ಪದನಿಮಿತ್ಯ ಸದಸ್ಯ :** ಆಯಾ ಅವಧಿಯಲ್ಲಿಯ ಕೃಷಿ ಮಹಾವಿದ್ಯಾಲಯ, ವಿಜಾಪೂರದ ಶಿಕ್ಷಣ ನಿರ್ದೇಶಕರು (ಕೃಷಿ), ಪದನಿಮಿತ್ಯ ಸದಸ್ಯರಾಗಿದ್ದು, ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವದು, ಸಂಘದ ಯಾವತ್ತು ಚಟುವಟಿಕೆಗಳಿಗೆ ಸಹಾಯ, ಸಹಕಾರ ಒದಗಿಸುವದು.

**ಸಂಯೋಜನಾಧಿಕಾರಿ :** ಕೃಷಿ ಮಹಾವಿದ್ಯಾಲಯ, ವಿಜಾಪೂರದ ವಿದ್ಯಾರ್ಥಿ ಚಟುವಟಿಕಿಗಳಲ್ಲಿ ಅನುಭವ ಹೊಂದಿರುವ ಶಿಕ್ಷಕರಾಗಿದ್ದು, ಸಂಘದ ಕಾರ್ಯಕಾರಿ ಸಮೀತಿಯ ಅನುಮೋದನೆಯ ಮೇರೆಗೆ, ಶಿಕ್ಷಣ ನಿರ್ದೇಶಕರಿಂದ ನಾಮನಿರ್ದೇಶನಗೊಂಡಿರುತ್ತಾರೆ ಮತ್ತು ಮಹಾ ವಿದ್ಯಾಲಯ, ಶಿಕ್ಷಣ ನಿರ್ದೇಶಕರು ಹಾಗೂ ಸಂಘದ ಮಧ್ಯೆ ಸಂಪರ್ಕಕೊಂಡಿಯಾಗಿರುತ್ತಾರೆ.

ನಿವೇದನೆ ಪತ್ರಿಕೆಯಲ್ಲಿ ರುಜು ಮಾಡಿರುವವರ ಪಟ್ಟಿ

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಪದಾಧಿಕಾರ | ಸಹಿ |
|---|---|---|---|---|---|
| 1. | ಶ್ರೀ. ಎಸ್. ಎಸ್. ಕರಭಂಟನಾಳ<br>ಕೃಷಿ ವಿಜ್ಞಾನ ಕೇಂದ್ರ, ವಿಜಾಪುರ | 33 | ನೌಕರಿ | ಅಧ್ಯಕ್ಷರು | |
| 2. | ಶ್ರೀ. ಮಂಜುನಾಥ ಆರ್.<br>ನೆಲಮಂಗಲ<br>ಜಿಲ್ಲಾ : ಬೆಂಗಳೂರ ಗ್ರಾಮೀಣ | 29 | ಖಾಸಗಿ | ಉಪಾಧ್ಯಕ್ಷರು | |
| 3. | ಶ್ರೀ. ಸಯೀದ ಅಬ್ಬಾಸ ಆರ್. ಮುಲ್ಲಾ<br>ಪ್ರಾದೇಶಿಕ ಕೃಷಿ ಸಂಶೋಧನಾ<br>ಕೇಂದ್ರ, ವಿಜಾಪುರ | 34 | ನೌಕರಿ | ಕಾರ್ಯದರ್ಶಿ | |
| 4. | ಶ್ರೀ. ಸೋಮನಗೌಡ ಬಿ. ಪಾಟೀಲ<br>ಪ್ರಾದೇಶಿಕ ಕೃಷಿ ಸಂಶೋಧನಾ<br>ಕೇಂದ್ರ, ವಿಜಾಪುರ | 25 | ನೌಕರಿ | ಖಜಾಂಚಿ | |
| 5. | ಶ್ರೀ. ಮಹಾದೇವ ಅಂಬಲಿ<br>ಹರನಾಳ,<br>ತಾ : ಸಿಂದಗಿ, ಜಿಲ್ಲಾ : ವಿಜಾಪುರ | 26 | ಖಾಸಗಿ | ಸಹ ಕಾರ್ಯದರ್ಶಿ | |

| | | | | |
|---|---|---|---|---|
| 6. | ಡಾ. ಅಳಗವಾಡಿ<br>ಡೀನ(ಕೃಷಿ)<br>ಕೃಷಿ ಮಹಾವಿದ್ಯಾಲಯ, ವಿಜಾಪೂರ | 54 | ನೌಕರಿ | ಪದನಿಮಿತ್ತ ಸದಸ್ಯರು |
| 7. | ಡಾ. ಆರ್. ಎಸ್. ಪೊದ್ದಾರ<br>ಕೃಷಿ ಮಹಾವಿದ್ಯಾಲಯ, ವಿಜಾಪೂರ | 42 | ನೌಕರಿ | ಸಂಘಟನಾಧಿಕಾರಿ |
| 8. | ಶ್ರೀ. ದಯಾಸಾಗರ ಬಿ. ಪಾಟೀಲ<br>ಅಥರ್ಗಾ,<br>ತಾ : ಇಂಡಿ, ಜಿಲ್ಲಾ : ವಿಜಾಪೂರ | 36 | ಖಾಸಗಿ | ಸದಸ್ಯರು |
| 9. | ಶ್ರೀ. ಸಿ. ಬಿ. ಕಬಾಡಗಿ<br>ಪ್ರಾದೇಶಿಕ್ ಕೃಷಿ ಸಂಶೋಧನಾ ಕೇಂದ್ರ, ವಿಜಾಪುರ | 35 | ನೌಕರಿ | ಸದಸ್ಯರು |
| 10. | ಶ್ರೀ. ಎಸ್. ಜಿ. ಗೊಳ್ಳಗಿ<br>ಕೃಷಿ ವಿಜ್ಞಾನ ಕೇಂದ್ರ, ವಿಜಾಪುರ | 33 | ನೌಕರಿ | ಸದಸ್ಯರು |
| 11. | ಶ್ರೀ. ಸಂತೋಷ ಕೆ. ಪಟ್ಟಣಶೆಟ್ಟಿ<br>ಕೃಷಿ ಮಹಾವಿದ್ಯಾಲಯ ವಿಜಾಪೂರ | 32 | ನೌಕರಿ | ಸದಸ್ಯರು |

| | | | | | |
|---|---|---|---|---|---|
| 12. | ಶ್ರೀ. ಗುರಪ್ಪ ಎಸ್. ಯಡಹಳ್ಳಿ<br>ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ | 31 | ನೌಕರಿ | ಸದಸ್ಯರು | |
| 13. | ಶ್ರೀ. ಮಹಾಂತೇಶ ಶಿರೂರ<br>ಕಲಗುರ್ಕಿ,<br>ತಾ : ಬಸವನ ಬಾಗೇವಾಡಿ,<br>ಜಿಲ್ಲಾ : ವಿಜಾಪುರ | 30 | ನೌಕರಿ | ಸದಸ್ಯರು | |
| 14. | ಶ್ರೀಮತಿ. ಸುಶ್ಮಾ ಮಾಲಿಪಾಟೀಲ<br>ಆನಂದ ನಗರ, ಆಶ್ರಮ ರಸ್ತೆ,<br>ವಿಜಾಪುರ | 28 | ಗೃಹಿಣಿ | ಸದಸ್ಯರು | |
| 15. | ಶ್ರೀ. ವಿಜಯಕುಮಾರ ಬಿರಾದಾರ<br>ಕಲ್ಲಹಂಗರಗ<br>ತಾ : ಜೇವರ್ಗಿ,<br>ಜಿಲ್ಲಾ : ಗುಲಬರ್ಗಾ | 27 | ನೌಕರಿ | ಸದಸ್ಯರು | |
| 16. | ವೆಂಕಟೇಶ ದೇಶಪಾಂಡೆ<br>ಮುಳವಾಡ,<br>ತಾ : ಬಸವನ ಬಾಗೇವಾಡಿ,<br>ಜಿಲ್ಲಾ : ವಿಜಾಪುರ | 24 | ವಿದ್ಯಾರ್ಥಿ | ಸದಸ್ಯರು | (V.S. Deshpande |
| 17. | ಅನೀಲ ಜಾಧವ<br>ಮೊ: ಹಿಟ್ಟಿನಹಳ್ಳಿ (LT)<br>ತಾ : ಸಿಂದಗಿ<br>ಜಿಲ್ಲಾ : ವಿಜಾಪುರ | 23 | ವಿದ್ಯಾರ್ಥಿ | ಸದಸ್ಯರು | |